**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರ ಉತ್ತರ.**

**ಪ್ರಶ್ನೆ:** ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಅಳಿಯದ ಶೌರ್ಯ, ಪರಾಕ್ರಮದ ಇತಿಹಾಸ ಹೊಂದಿರುವ ಕಿತ್ತೂರು ಕೋಟೆ ಹಾಗೂ ಅದಕ್ಕೆ ಸಂಬಂಧಿಸಿದ ಕುರುಹುಗಳ ರಕ್ಷಣೆ, ಅಭಿವೃದ್ಧಿ ನನೆಗುದಿಗೆ ಬಿದ್ದಿದೆ. ಪ್ರವಾಸೋದ್ಯಮ ಕೇಂದ್ರವಾಗಬೇಕಿದ್ದ ಕೋಟೆ, ಕೊತ್ತಲುಗಳು ಸರಕಾರಗಳ ನಿರ್ಲಕ್ಷ್ಯ ಧೋರಣೆಯಿಂದಾಗಿ ನಶಿಸುತ್ತಿವೆ. ಕಿತ್ತೂರು ಸಂಸ್ಥಾನದ ಸ್ಮಾರಕ ಹಾಗೂ ಕಿತ್ತೂರು ಕೋಟೆ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿರುವ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡುತ್ತಿರುವ ಅನುದಾನದಲ್ಲಿ ಸಣ್ಣಪುಟ್ಟ ಕೆಲಸ ಹೊರತುಪಡಿಸಿದರೆ, ಸ್ಮಾರಕಗಳ ಅಭಿವೃದ್ಧಿ ದೂರದ ಮಾತಾಗಿಯೇ ಉಳಿದಿದೆ. ಕಳೆದ 17 ವರ್ಷಗಳಲ್ಲಿ 53 ಕೋಟಿ ಅನುದಾನ ನೀಡಿರುವುದನ್ನು ಸರ್ಕಾರ ಗಮನಿಸಬೇಕಾದ ಅಂಶವಾಗಿದೆ.

2008ರಲ್ಲಿ ಪ್ರಾಧಿಕಾರ ರಚನೆಯಾಗಿದ್ದು, ಪ್ರಾಧಿಕಾರದಿಂದ ವರ್ಷದಲ್ಲಿ ಒಂದು ಸಭೆ ನಡೆಯುವುದೇ ಅಪರೂಪವಾಗಿದೆ. ಪ್ರಾಧಿಕಾರಕ್ಕೆ ಸದಸ್ಯರ ನೇಮಕವೂ ಆಗಿಲ್ಲ. ಕಾಟಾಚಾರಕ್ಕೆ ಕಿತ್ತೂರಿನಲ್ಲಿ ಪ್ರಾಧಿಕಾರದ ಕಚೇರಿ ತೆರೆಯಲಾಗಿದ್ದು, ಆಯುಕ್ತರನ್ನು ನೇಮಿಸಿ ಸರಕಾರ ಕೈ ತೊಳೆದುಕೊಂಡಿರುವುದು ಎದ್ದು ಕಾಣಿಸುತ್ತಿದೆ. ಪ್ರವಾಸಿಗರನ್ನು ಆಕರ್ಷಿಸಲು ಕಿತ್ತೂರು ಕೋಟೆ ಮಾದರಿಯ ಅರಮನೆ ಪ್ರತಿರೂಪ, ನಿರ್ಮಾಣಕ್ಕೆ 113 ಕೋಟಿ ರೂ.ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡಿತ್ತು. ಬಿಜೆಪಿ ಸರಕಾರದ ಅವಧಿಯಲ್ಲಿ ಮುನ್ನಲೆಗೆ ಬಂದಿದ್ದ ಈ ಯೋಜನೆಗೆ ವಿರೋಧ ವ್ಯಕ್ತವಾಗಿತ್ತು. ಕೋಟೆಯ ಹಿಂಭಾಗದಲ್ಲಿಯೇ ಪ್ರತಿರೂಪ ನಿರ್ಮಿಸಬೇಕೆಂದು ಕಾಂಗ್ರೆಸ್ ಹೋರಾಟ ಮಾಡಿತ್ತು. ಹೀಗಾಗಿ ಯೋಜನೆ ನನೆಗುದಿಗೆ ಬಿದ್ದಿತ್ತು. ಬಳಿಕ ಸರಕಾರ ಸೇರಿದಂತೆ ಯಾರೂ ಆ ಬಗ್ಗೆ ಚಕಾರವೆತ್ತದೆ ಇರುವುದು ನೋವಿನ ಸಂಗತಿಯಾಗಿದೆ.

ಚನ್ನಮ್ಮನ ಕಿತ್ತೂರಿನ ಐತಿಹಾಸಿಕ ಗಡಾದ ಮರಡಿ ವಾಚ್ ಟವರ್ ಕಳಚಿ ಬಿದ್ದಿರುವುದು ಸರ್ಕಾರ ಕೂಡಲೇ ಗಮನಿಸುವುದು ಸೂಕ್ತ. ಪ್ರವಾಸಿಗರನ್ನು ಆಕರ್ಷಿಸಲು 7 ಎಕರೆಯಲ್ಲಿ ಥೀಮ್ ಪಾರ್ಕ್ ನಿರ್ಮಾಣಕ್ಕೆ ಕ್ರಿಯಾಯೋಜನೆ ರೂಪಿಸಿ ಬಜೆಟ್‌ನಲ್ಲಿ ಅನುಮೋದನೆಗೊಂಡರೂ ಟೆಂಡರ್ ಕರೆಯದೇ ಸರಕಾರ ಕಾಲಹರಣ ಮಾಡುತ್ತಿದೆ.

ಚನ್ನಮ್ಮಾಜಿ ಮತ್ತು ವೀರ ಮಹನೀಯರು ಹುಟ್ಟಿ ಬೆಳೆದ ಕಾರ್ಯಕ್ಷೇತ್ರ, ಸ್ಮಾರಕ ಮತ್ತು ಸಮಕಾಲೀನ ಕಿತ್ತೂರು ಪರಂಪರೆ ತಾಣಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲು ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ಆದರೆ, ಸರ್ಕಾರ ನಿರ್ಲಕ್ಷ್ಯದಿಂದ ಕಿತ್ತೂರು ಸಂಸ್ಥಾನ ವ್ಯಾಪ್ತಿಗೆ ಒಳಪಟ್ಟ 34 ಗ್ರಾಮಗಳಲ್ಲಿ ಐತಿಹಾಸಿಕ ಕುರುಹುಗಳು ರಕ್ಷಣೆ ಇಲ್ಲದೆ ಹಾಳಾಗುತ್ತಿರುವುದು ದುರಂತವೇ ಸರಿ.

ಸರ್ಕಾರಕ್ಕೆ ಬೇರೆ ಪ್ರಾಧಿಕಾರಗಳ ಮೇಲೆ ಇರುವ ಕಾಳಜಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಮೇಲೆ ಏಕಿಲ್ಲ ಎಂದು ಜನರು ಪ್ರಶ್ನಿಸುತ್ತಿದ್ದಾರೆ. ಆದ್ದರಿಂದ ಇನ್ನಾದರೂ ಸರ್ಕಾರವು ಕಿತ್ತೂರು ಕೋಟೆ,

ಸ್ಮಾರಕಗಳ ಅಭಿವೃದ್ಧಿಗೆ ಈ ಕೂಡಲೇ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿ ಪಡಿಸುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

## ಸರ್ಕಾರದ ಉತ್ತರ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಎಂದು ಅಳಿಯದ ಶೌರ್ಯ, ಪರಾಕ್ರಮದ ಇತಿಹಾಸ ಹೊಂದಿರುವ ಕಿತ್ತೂರು ಕೋಟೆ ಹಾಗೂ ಅದಕ್ಕೆ ಸಂಬಂದಿಸಿದ ಕುರುಹುಗಳ ರಕ್ಷಣೆಗಾಗಿ ಈಗಾಗಲೇ ಹಲವು ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ರಚನೆಯಾದಾಗಿನಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಹಂತ-ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2011 ಜಾರಿಗೆ ಬಂದ ತರುವಾಯ 2012ನೇ ಸಾಲಿನಿಂದ ಕಾಲ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಂಡಳಿ ಸಭೆಗಳು ಜರುಗಿರುತ್ತವೆ, ಪ್ರಸ್ತುತ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ 2025 ಜಾರಿಗೆ ಬಂದ ತರುವಾಯ ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಮಂಡಳಿ ಸಭೆಗಳನ್ನು ನಡೆಸಿ ಪ್ರಾಧಿಕಾರದ ಅಭಿವೃದ್ಧಿಗಾಗಿ ಹಲವು ನಿರ್ಣಯಗಳನ್ನ ಕೈಗೊಳ್ಳಲಾಗಿರುತ್ತದೆ.

ಕಿತ್ತೂರು ಕೋಟೆ ಮಾದರಿಯ ಅರಮನೆ, ಪ್ರತಿರೂಪ ನಿರ್ಮಾಣಕ್ಕೆ ಈಗಾಗಲೇ ರೂ. 113 ಕೋಟಿ ರೂಪಾಯಿಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ, ಆದರೆ ಜಮೀನಿನ ಅಲಭ್ಯತೆಯಿಂದಾಗಿ ಸದರಿ ಕಾಮಗಾರಿಯನ್ನು ಪ್ರಸ್ತುತ ಕೈಗೆತ್ತಿಕೊಂಡಿರುವುದಿಲ್ಲ. ಚನ್ನಮ್ಮನ ಕಿತ್ತೂರಿನ ಐತಿಹಾಸಿಕ ಗಡಾದ ಮರಡಿ ವಾಚ್ ಟವರ್ ಕಳಚಿ ಬಿದ್ದಿರುವ ಸಂಬಂಧ ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆ ಸ್ವೀಕೃತಗೊಂಡಿರುವುದಿಲ್ಲ.

ಕಿತ್ತೂರು ಕೋಟೆ ಆವರಣದಲ್ಲಿ ರಾಣಿ ಚನ್ನಮ್ಮನವರ ಕಾಲದ ಹೋರಾಟವು ಸೇರಿದಂತೆ ಸಂಪೂರ್ಣ ಸ್ವತಂತ್ರ ಹೋರಾಟವನ್ನು ಬಿಂಬಿಸುವ ಕಾಮಗಾರಿಗಳು, ಭವ್ಯವಾದ ನಂದಿಧ್ವಜ ನಿರ್ಮಾಣ, ಹೂದೋಟ, ಮಕ್ಕಳಿಗೆ ಆಟೋಟ ಸಲಕರಣೆಗಳು, ಕುಡಿಯುವ ನೀರಿನ ವ್ಯವಸ್ಥೆ, ವಿಶ್ರಾಂತಿ ಕೊಠಡಿ ವ್ಯವಸ್ಥೆ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ರೂ.30.00 ಕೋಟಿಗಳ ವೆಚ್ಚದ ಥೀಮ್ ಪಾರ್ಕ್ ನಿರ್ಮಾಣ ಕಾಮಗಾರಿಯನ್ನು ಮುಂದಿನ ಮೂರು ವರ್ಷಗಳ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನವನ್ನು ಬಳಸಿಕೊಂಡು ಹಂತ ಹಂತವಾಗಿ ಕಾರ್ಯಗತಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮುಂದುವರೆದು 2025-26ನೇ ಸಾಲಿನಲ್ಲಿ ಈ ಕಾಮಗಾರಿಗೆ ರೂ. 10 ಕೋಟಿಗಳ ಅನುದಾನ ಒದಗಿಸಿದ್ದು, ಸದರಿ ಅನುದಾನದ ಪೈಕಿ ಮೊದಲನೇ ಮತ್ತು ಎರಡನೇ ಕಂತಿನ ಅನುದಾನ ರೂ. 5 ಕೋಟಿಗಳನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ.

ಚನ್ನಮಾಜಿ ಮತ್ತು ವೀರ ಮಹನೀಯರು ಹುಟ್ಟಿ ಬೆಳೆದ ಕಾರ್ಯಕ್ಷೇತ್ರ, ಸ್ಮಾರಕಗಳು ಮತ್ತು ಸಮಕಾಲೀನ ಕಿತ್ತೂರು ಪರಂಪರೆ ತಾಣಗಳನ್ನು ಹಾಗೂ ಕಿತ್ತೂರು ಸಂಸ್ಥಾನ ವ್ಯಾಪ್ತಿಯ 34 ಗ್ರಾಮಗಳಲ್ಲಿನ ಐತಿಹಾಸಿಕ ಕುರುಹುಗಳ ರಕ್ಷಣೆಗೆ ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಗೊಂಡು ಅಭಿವೃದ್ಧಿ ಪಡಿಸಲಾಗುತ್ತಿದೆ.

ಕಡತ ಸಂಖ್ಯೆ: ಕಂಇ 294 ಆರ್‌ಬಿಎ 2025

**(ಕೃಷ್ಣ ಬೈರೆಗೌಡ)**
**ಕಂದಾಯ ಸಚಿವರು**